

# ಹೊಸ ಹೊಡೆತ, ಹಳೆಯ ಮಿಡಿತ ಎರಡೂ ಇಷ್ಟ

**◆ ವಿಶ್ವಕಪ್ ಕ್ರಿಕೆಟ್‌ಗೆ ಆಟಗಾರರು ಮಾನಸಿಕವಾಗಿ ಸಿದ್ಧರಾಗಬೇಕಾದ ಕಾಲವಿದು. ಈಗ 'ಐಪಿಎಲ್' ನಡೆಯುತ್ತಿರುವುದು ಒಳಿತೋ ಕೆಡುಕೋ?**

ಕೆಡುಕು ಎನ್ನಲಾಗದು. ಎರಡು ಟೂರ್ನಿಗಳ ನಡುವೆ ಕನಿಷ್ಠ ಎರಡು ವಾರಗಳ ಅಂತರ ಇರಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಒಂದು ವಿಧದಲ್ಲಿ ಐಪಿಎಲ್, ವಿಶ್ವಕಪ್‌ಗೆ ಕೆಲವು ಪಾಠಗಳನ್ನು ಕಲಿಯುವ ಮಾರ್ಗ. ಇಲ್ಲಿನ ವರ್ಕ್‌ಲೋಡ್ ನಿಭಾಯಿಸುವುದರಿಂದ ವಿಶ್ವಕಪ್‌ನಲ್ಲಿ ಆಡಲು ಅನುಕೂಲ. ಇನ್ನು ಹೊಂದಾಣಿಕೆಯ ವಿಷಯದಲ್ಲಿ ಏನೂ ಸಮಸ್ಯೆ ಇಲ್ಲ. ಎರಡೂ ನಿಗದಿತ ಪಂದ್ಯಗಳ ಟೂರ್ನಿಗಳೇ ಆಗಿವೆ. ಹೀಗಾಗಿ ಇಲ್ಲಿ ಪರೀಕ್ಷೆಗೆ ಒಳಗಾಗುವ ಸಂದರ್ಭಗಳಂತೆ ಅಲ್ಲಿಯೂ ಪರಿಸ್ಥಿತಿ ಎದುರಾಗುತ್ತದೆ. ನನ್ನ ಪ್ರಕಾರ ಇದು 'ಮ್ಯಾಚ್ ಪ್ರಾಕ್ಟೀಸ್'. ಪ್ರಮುಖ ಟೂರ್ನಿಗಳಿಗೆ ಸಿದ್ಧಗೊಳ್ಳಲು ಶಿಬಿರಗಳನ್ನು ನಡೆಸುತ್ತಾರೆ. ಅಲ್ಲಿ ಕಲಿಯುವುದಕ್ಕಿಂತ ಹೆಚ್ಚಿನ ಪ್ರಾಯೋಗಿಕ ಕಲಿಕೆ ಪಂದ್ಯಗಳನ್ನು ಆಡುವುದರಿಂದ ಸಾಧ್ಯ ಎನ್ನುವುದು ನನ್ನ ಅನುಭವ. ಆಟಗಾರರು ತಂತಮ್ಮ ತಪ್ಪುಗಳನ್ನು ತಿದ್ದಿಕೊಂಡು ವಿಶ್ವಕಪ್‌ನಲ್ಲಿ ಚೆನ್ನಾಗಿ ಆಡಲು ಲಭಿಸಿರುವ ಅವಕಾಶ ಇದು. ಹೀಗಾಗಿಯೇ ಐಪಿಎಲ್ ಒಂದು

ಕಪ್ ನಮ್ದೇ